# ಬೆಳ್ಳಿತೆರೆಯ ಬೆಳಕಿನಲ್ಲಿ ರವೀಕ್ಷಾ

‘ಹೊಸಬರಿಗೆ ಚಿತ್ರರಂಗದಲ್ಲಿ ಹೆಚ್ಚು ಆಯ್ಕೆಗಳಿರುವುದಿಲ್ಲ. ಆದರೆ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯುವಂಥ ಕೆಲವೇ ಪಾತ್ರಗಳನ್ನಾದರೂ ಮಾಡಬೇಕೆನ್ನುವ ಆಸೆಯಿದೆ’ ಎಂದು ಹೇಳಿಕೊಂಡಿದ್ದಾರೆ ಚಂದನವನಕ್ಕೆ ಈಚೆಗಷ್ಟೆ ಹೆಜ್ಜೆಯಿಟ್ಟಿರುವ ನಟಿ ರವೀಕ್ಷಾ ಶೆಟ್ಟಿ.

ಈಚೆಗೆ ‘ಮ್ಯಾಡ್ನೆಸ್’ ಸಿನಿಮಾ ಘೋಷಣೆಯಾಗಿದ್ದು, ‘ಪುಷ್ಪಕ ವಿಮಾನ’ ಹಾಗೂ ‘ಮಾನ್ಸೂನ್ ರಾಗ’ ಸಿನಿಮಾಗಳನ್ನು ನಿರ್ದೇಶಿಸಿರುವ ಎಸ್. ರವೀಂದ್ರನಾಥ್ ಈ ಸಿನಿಮಾ ರೂವಾರಿಯಾಗಿದ್ದಾರೆ. ಈ ಸಿನಿಮಾದಲ್ಲಿ ರವೀಕ್ಷಾ ನಟಿಸುತ್ತಿದ್ದು ಅವರ ಅಭಿನಯದ ಇನ್ನೂ ಮೂರು ಸಿನಿಮಾಗಳು ಬಿಡುಗಡೆಯ ಹಾದಿಯಲ್ಲಿವೆ.



‘‘ಪೀಟರ್’ ಸಿನಿಮಾಗೆ ಸಹಿ ಹಾಕಿದ್ದೇನೆ. ಇದರೊಂದಿಗೆ ‘ಸೀಟ್‌ಎಡ್ಜ್’, ‘ಮರಿಕಾ’ ಮತ್ತು ಕೆಲವು ಸಿನಿಮಾಗಳಲ್ಲಿ ನಟಿಸುತ್ತಿದ್ದೇನೆ. ನಟಿಯಾಗಿ ಈ ಸಿನಿಮಾಗಳು ಉತ್ತಮ ಆರಂಭವಾಗಿರುವುದಕ್ಕೆ ಖುಷಿಯಿದೆ. ಬೆಳ್ಳಿತೆರೆ ಮೇಲೆ ನನ್ನನ್ನು ಕಾಣಲು ಕಾತುರಳಾಗಿದ್ದೇನೆ’’ ಎಂದಿದ್ದಾರೆ.

‘ಹೊಸಬಳಾಗಿರುವುದರಿಂದ ಹೆಚ್ಚು ಸಂಭಾವನೆಗೆ ಬೇಡಿಕೆಯಿಡಲು ಸಾಧ್ಯವಿಲ್ಲ. ಆದರೆ ನನ್ನ ಕೆಲಸ ಗುಣಮಟ್ಟದಿಂದ ಕೂಡಿರಬೇಕು ಎನ್ನುವುದು ನನ್ನ ಆಸೆ. ನೋಡುಗರ ಮನಸ್ಸಿನಲ್ಲಿ ಉಳಿಯುವಂಥ ಕೆಲವೇ ಪಾತ್ರಗಳಾದರೂ ಸರಿ ಮಾಡಬೇಕು’ ಎಂದು ತಮ್ಮ ಪಾತ್ರಾಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ.

‘ಮಧ್ಯಮ ವರ್ಗದ ಕುಟುಂಬದಿಂದ ಬಂದವಳು ನಾನು. ಸಿನಿಮಾರಂಗದಲ್ಲಿ ಗಟ್ಟಿಯಾಗಿ ಪಾದ ಊರಬೇಕೆಂದರೆ ಆರ್ಥಿಕ ಸ್ವಾತಂತ್ರ್ಯವೂ ಇರಲೇಬೇಕು. ಹೊಸಬರಿಗೆ ಅವಕಾಶಗಳು ಸಿಗುವುದು ಕಷ್ಟ. ಹೀಗಾಗಿ ಆರ್ಥಿಕವಾಗಿ ಸಬಲತೆ ಕಾಯ್ದುಕೊಳ್ಳಲೆಂದೇ ಕೆಲಸದ ಜೊತೆಜೊತೆಗೆ ಸಿನಿಮಾದಲ್ಲಿಯೂ ನಟಿಸುತ್ತಿದ್ದೆ’ ಎಂದು ತಮ್ಮ ಹಾದಿಯನ್ನು ಮೆಲುಕು ಹಾಕಿದ್ದಾರೆ.



# ಜನ ಕಂಟೆಂಟ್ ನೋಡುತ್ತಾರೆ ಧೀರೆನ್

ಸದ್ಯ ‘ಪಬ್ಬಾರ್’ ಸಿನಿಮಾ ಚಿತ್ರೀಕರಣದಲ್ಲಿ ಬ್ಯುಸಿಯಾಗಿರುವ ನಟ ಧೀರೆನ್, ಈ ಸಿನಿಮಾಗಾಗಿ ಸಾಕಷ್ಟು ತಯಾರಿಯಲ್ಲಿ ತೊಡಗಿಕೊಂಡಿದ್ದಾರೆ.

‘ಪಬ್ಬಾರ್’ನಲ್ಲಿ ಧೀರೆನ್ ಪೊಲೀಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಈ ಪಾತ್ರದ ಬಗ್ಗೆ ಬಹಳ ನಿರೀಕ್ಷೆಗಳನ್ನು ವ್ಯಕ್ತಪಡಿಸಿದ್ದಾರೆ.

‘‘ಈ ಪಾತ್ರದಲ್ಲಿ ತಲ್ಲೀನತೆಯಿದೆ. ಭಾವನಾತ್ಮಕತೆ ಇದೆ. ವಾಸ್ತವಿಕತೆಯಿಂದ ಕೂಡಿದೆ. ಈಗ ಪ್ರೇಕ್ಷಕರು ಮಾಸ್ ಡೈಲಾಗ್‌ಗಳಿಗೆ ಅಥವಾ ಮಾಸ್ ಸಿನಿಮಾಗಳಿಗೆ ಕೇರ್ ಮಾಡುತ್ತಿಲ್ಲ. ಅವರಿಗೆ ಒಳ್ಳೆಯ ಕಂಟೆಂಟ್ ಬೇಕು. ಇದೇ ನನ್ನ ಆಲೋಚನೆಯಲ್ಲಿರುವುದು ಕೂಡ. ‘ಪಬ್ಬಾರ್’ ಕೂಡ ಅಂಥ ಸಿನಿಮಾ’’ ಎಂದು ಹೇಳಿದ್ದಾರೆ.

ತಾವೂ ಕಂಟೆಂಟ್ ಆಧರಿತ ಸಿನಿಮಾ ಕಥೆಗಳ ದೊಡ್ಡ ಅಭಿಮಾನಿ ಎಂದು ಹೇಳಿಕೊಂಡಿರುವ ಧೀರೆನ್, ಈ ಪಾತ್ರಕ್ಕಾಗಿ ಟೇಕ್ವಾಂಡೊ ಕಲಿತು ಹದಿನೈದು ಕೆ.ಜಿ.ಯನ್ನೂ ಇಳಿಸಿಕೊಂಡಿದ್ದಾರೆ.

‘ಇದು ಅಡ್ವೆಂಚರ್ ಕ್ರೈಂ ಥ್ರಿಲ್ಲರ್ ಸಿನಿಮಾ ಆಗಿದ್ದು, ದೈಹಿಕ ಹಾಗೂ ಭಾವನಾತ್ಮಕ ಕೌಶಲಗಳನ್ನು ಬಯಸುತ್ತದೆ. ನಿರ್ದೇಶಕರು ಕಥೆ ಹೇಳಿದಾಗ ನನಗೆ ಬಹಳ ಇಷ್ಟವಾಗಿಬಿಟ್ಟಿತು. ಇದೇ ಮೊದಲ ಬಾರಿ ಪೊಲೀಸ್ ಯೂನಿಫಾರ್ಮ್ ತೊಡುತ್ತಿದ್ದೇನೆ. ಈ ಪಾತ್ರಕ್ಕಾಗಿ ಟೇಕ್ವಾಂಡೊ ಕಲಿತು ತೂಕ ಇಳಿಸಿಕೊಂಡಿದ್ದೇನೆ. ನಟನಾಗಿ, ಇಂದಿನ ಟ್ರೆಂಡ್‌ಗೆ ತಕ್ಕುದಾಗಿ ಸ್ಕ್ರಿಪ್ಟ್ ಇರಬೇಕು ಎಂಬುದನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ’ ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟಿದ್ದಾರೆ.